ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	220
ಸದಸ್ಯರ ಹೆಸರು :	ಶ್ರೀ ಕಾಂತರಾಜ್ (ಬಿಎಂಎಲ್)
ಉತ್ತರಿಸಬೇಕಾದ ದಿನಾಂಕ :	2-2-2021
ಉತ್ತರಿಸುವವರು :	ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ತುಮಕೂರು ಜಿಲ್ಲೆ ಗುಬ್ಬಿ ಪಟ್ಟಣ ಪಂಚಾಯ್ತಿ ಹೊಂದಿರುವ ಜನಸಂಖ್ಯೆ ಎಷ್ಟು; ವಾರ್ಡ್‌ಗಳ ಸಂಖ್ಯೆ ಎಷ್ಟು; ಪಟ್ಟಣ ಪಂಚಾಯಿತಿಯ ಸರಹದ್ದು ಎಲ್ಲಿಯವರೆಗೆ ಇದೆ; (ವಿವರವಾದ ಮಾಹಿತಿ ನೀಡುವುದು)	2011ರ ಜನಗಣತಿಯ ಪ್ರಕಾರ ಗುಬ್ಬಿ ಪಟ್ಟಣದ ಜನಸಂಖ್ಯೆ: 18446 ಇರುತ್ತದೆ. ಗುಬ್ಬಿ ಪಟ್ಟಣ ಪಂಚಾಯಿತಿಯು ಒಟ್ಟು 19 ವಾರ್ಡ್‌ಗಳನ್ನು ಹೊಂದಿದೆ. ಗುಬ್ಬಿ ಪಟ್ಟಣ ಪಂಚಾಯಿತಿಯ ಸರಹದ್ದು ಪೂರ್ವಕ್ಕೆ: ಬಿದ್ದಾಂಜನೇಯಸ್ವಾಮಿ ದೇವಸ್ಥಾನ ಪಶ್ಚಿಮಕ್ಕೆ: ನಿಟ್ಟೂರ್‌ಗೇಟ್ ಉತ್ತರಕ್ಕೆ: ರೈಲ್ವೆ ಹಳಿ ದಕ್ಷಿಣಕ್ಕೆ: ಗದ್ದೆಬಯಲು (ಸರಹದ್ದಿನ ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ).
ಆ)	ಗುಬ್ಬಿ ಪಟ್ಟಣ ಪಂಚಾಯ್ತಿಯಲ್ಲಿ ಮಾರನಕಟ್ಟೆ ಕೆರೆ ಇದೆಯೇ? ಹಾಗಿದ್ದಲ್ಲಿ ಇದರ ವಿಸ್ತೀರ್ಣವೆಷ್ಟು ಇದಕ್ಕೆ ಮಾಲೀಕರು ಯಾರು; (ವಿವರವಾದ ಮಾಹಿತಿ ನೀಡುವುದು)	ಗುಬ್ಬಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಮಾರನಕಟ್ಟೆ ಕೆರೆ ಇದೆ. ಜಾಗದ ವಿಸ್ತೀರ್ಣ 46.00 ಎಕರೆ ಇದೆ ಮಾಲೀಕರು: ಪಟ್ಟಣ ಪಂಚಾಯಿತಿ ಗುಬ್ಬಿ.
ಇ)	ಸದರಿ ಮಾರನಕಟ್ಟೆ ಜಾಗವನ್ನು ಸರ್ಕಾರವು ಯಾವ ಯಾವ ಸಂಸ್ಥೆಗಳಿಗೆ ಗುತ್ತಿಗೆ/ಕ್ರಯಕ್ಕೆ ನೀಡಲಾಗಿದೆ; (ವಿವರವಾಗಿ ಸಂಸ್ಥೆಯ ಹೆಸರು, ಗುತ್ತಿಗೆ/ಕ್ರಯ ನೀಡಿದ ವರ್ಷ ಹಾಗೂ ವಿಸ್ತೀರ್ಣದೊಂದಿಗೆ ಸರ್ಕಾರಿ ಆದೇಶ ಪ್ರತಿಗಳೊಂದಿಗೆ ವಿವರವಾದ ಮಾಹಿತಿ ನೀಡುವುದು)	ವಿವಿಧ ಸಂಘ-ಸಂಸ್ಥೆಗಳಿಗೆ ನೀಡಿರುವ ಮಾಹಿತಿಯ ಪಟ್ಟಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.
ಈ)	ಇದರಲ್ಲಿ ಖಾಲಿ ಉಳಿದಿರುವ ಜಾಗ ಎಷ್ಟು; ಇದನ್ನು ಸರ್ಕಾರ ಯಾವ ಉದ್ದೇಶಕ್ಕೆ ಬಳಸಲು ಚಿಂತಿಸಿದೆ?	ಖಾಲಿ ಉಳಿದಿರುವ ಜಾಗ ಸುಮಾರು 25-00 ಎಕರೆ ಖಾಲಿ ಜಾಗ ಇರುತ್ತದೆ. ಉಳಿಕೆ ಜಮೀನು ಅವಶ್ಯಕತೆಗನುಗುಣವಾಗಿ ನಿಯಮಾನುಸಾರ ಬಳಕೆ ಮಾಡಲು ಕ್ರಮವಹಿಸಲಾಗುವುದು.

ಸಂಖ್ಯೆ: ನಅಇ 9 ಜಿಇಎಲ್ 2021

(ಎನ್.ನಾಗರಾಜ್ ಎಂ.ಟಿ.ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಅನುಬಂಧ - 1

ಗುಬ್ಬಿ ಪಟ್ಟಣ ಪಂಚಾಯಿತಿಯ ಪ್ರದೇಶದ ಎಲ್ಲೆಯ ವಿವರ

ಗುಬ್ಬಿ ಪಟ್ಟಣದ ದಕ್ಷಿಣ ಭಾಗದ ಸ.ನಂ: 133 ರ ಆಗ್ನೇಯ ಮೂಲೆ 'ಎ' ಬಿಂದುವಿನಿಂದ ಪ್ರಾರಂಭಗೊಂಡು ಉತ್ತರಕ್ಕೆ ಸಾಗುತ್ತಾ ಸ.ನಂ: 132 ರ ಪೂರ್ವಕ್ಕೆ ತಿರುಗಿ ಪುನಃ ಉತ್ತರಕ್ಕೆ ತಿರುಗುತ್ತಾ ಸ.ನಂ: 131,99 ರ ಪಶ್ಚಿಮಕ್ಕೆ ತಿರುಗುತ್ತಾ ಸ.ನಂ: 100 ರ ಗಡಿ ತಲುಪಿ ಪುನಃ ಪೂರ್ವಾಭಿಮುಖವಾಗಿ ಚಲಿಸುತ್ತಾ ಸ.ನಂ: 98 ರ ಗಡಿ ತಲುಪಿ ಪುನಃ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಸ.ನಂ:71,70,69,68,67,64,63,62,61,60 ರ ಗಡಿ ತಲುಪಿ ಉತ್ತರಕ್ಕೆ ತಿರುಗಿ ಪುನಃ ಪೂರ್ವಕ್ಕೆ ಚಲಿಸುತ್ತಾ ಸ.ನಂ:54,58,57 ರ ಗಡಿ ತಲುಪಿ ಪೂರ್ವಕ್ಕೆ ತಿರುಗಿ ಸ.ನಂ: 56 ರ ಉತ್ತರಾಭಿಮುಖವಾಗಿ ಚಲಿಸುತ್ತಾ ಪುನಃ ಪಶ್ಚಿಮಾಭಿಮುಖವಾಗಿ ಸಾಗುತ್ತಾ ಸ.ನಂ:55,54,53,52,51 ಹಾಗೂ ರಾಷ್ಟ್ರೀಯ ಹೆದ್ದಾರಿ-73ನ್ನು ದಾಟಿ ಪೂರ್ವಕ್ಕೆ ತಿರುಗಿ ಸಂಗೋನಹಳ್ಳಿ ಗ್ರಾಮದ ಸ.ನಂ: 42 ರ ಗಡಿಯೊಂದಿಗೆ ಉತ್ತರಾಭಿಮುಖವಾಗಿ ಚಲಿಸುತ್ತಾ ಸ.ನಂ:47,53,52,89,88,78 ರ ಗಡಿ ತಲುಪಿ ಪಶ್ಚಿಮಕ್ಕೆ ಸಾಗುತ್ತಾ ಸ.ನಂ:79,81 ರ ಹಾಳ್ಯ ಗ್ರಾಮದ ಸ.ನಂ: 93 ರ ಗಡಿ ತಲುಪಿ ರಾಯವಾರ ಗ್ರಾಮದ ಸ.ನಂ:35,34,58,62,63,75,74,73 ರ ಗಡಿ ದಾಟಿ ಚನ್ನಶೆಟ್ಟಿಹಳ್ಳಿ ಗ್ರಾಮದ ಸ.ನಂ:48,47,46,45,67,68,69,71,75,78 ರ ಗಡಿ ದಾಟಿ ಹಾಗೂ ಗುಬ್ಬಿ ಗ್ರಾಮದ ಸ.ನಂ: 315 ರ ಗಡಿ ತಲುಪಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಪುನಃ ಪೂರ್ವಕ್ಕೆ ತಿರುಗಿ ಪುನಃ ಉತ್ತರಕ್ಕೆ ತಿರುಗಿ ಸ.ನಂ: 314 ರ ಗಡಿಯಿಂದ ಪೂರ್ವಕ್ಕೆ ತಿರುಗಿ ಪುನಃ ಉತ್ತರಕ್ಕೆ ತಿರುಗಿ ಸ.ನಂ: 313 ರ ಗಡಿ ತಲುಪಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಸ.ನಂ:308,307 ಮತ್ತು 309 ರ ಗಡಿ ತಲುಪಿ ಪೂರ್ವಕ್ಕೆ ಸಾಗುತ್ತಾ ಪುನಃ ದಕ್ಷಿಣಕ್ಕೆ ತಿರುಗಿ ರಾಷ್ಟ್ರೀಯ ಹೆದ್ದಾರಿ-73 ರ ರಸ್ತೆಯನ್ನು ದಾಟಿ ಸ.ನಂ:306,305 ರ ಗಡಿ ತಲುಪಿ ಪಶ್ಚಿಮಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಸ.ನಂ:304,303,302,299 ರ ಗಡಿ ತಲುಪಿ ಪೂರ್ವಕ್ಕೆ ಸಾಗುತ್ತಾ ಸ.ನಂ: 291 ರ ಗಡಿ ತಲುಪಿ ದಕ್ಷಿಣದಿಂದ ಪೂರ್ವಕ್ಕೆ ತಿರುಗಿ ಸ.ನಂ: 290 ರ ಗಡಿ ತಲುಪಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಸ.ನಂ: 289 ರ ಗಡಿ ತಲುಪಿ ಪೂರ್ವಕ್ಕೆ ಸಾಗುತ್ತಾ ಸ.ನಂ:288,287,286,285 ರ ಗಡಿ ತಲುಪಿ ಉತ್ತರಕ್ಕೆ ಸಾಗುತ್ತಾ ಪುನಃ ಪೂರ್ವಕ್ಕೆ ತಿರುಗಿ ಪುನಃ ದಕ್ಷಿಣಕ್ಕೆ ಸಾಗುತ್ತಾ ಗುಬ್ಬಿ ಗ್ರಾಮದ ಗಡಿಯೊಂದಿಗೆ ಸಾಗುತ್ತಾ ಸ.ನಂ:283,282 ರ ಗಡಿ ತಲುಪಿ ಪೂರ್ವಕ್ಕೆ ಸಾಗುತ್ತಾ ಸ.ನಂ:237,236 ರ ಗಡಿ ತಲುಪಿ ಸ.ನಂ: 235 ರ ಗಡಿಯಿಂದ ದಕ್ಷಿಣದಿಂದ ಪೂರ್ವಕ್ಕೆ ತಿರುಗಿ ಪುನಃ ಉತ್ತರಾಭಿಮುಖವಾಗಿ ಪೂರ್ವಕ್ಕೆ ಚಲಿಸುತ್ತಾ ಸ.ನಂ:234,233,232,231 ರ ಗಡಿ ತಲುಪಿ ದಕ್ಷಿಣಕ್ಕೆ ತಿರುಗಿ ಸ.ನಂ: 222 ರ ಗಡಿ ತಲುಪುತ್ತಾ ಪೂರ್ವಕ್ಕೆ ತಿರುಗಿ ಸ.ನಂ: 221,220 ರ ಗಡಿ ತಲುಪಿ ದಕ್ಷಿಣಕ್ಕೆ ತಿರುಗಿ ಸ.ನಂ: 218,217 ರ ಗಡಿ ತಲುಪಿ ಪೂರ್ವಕ್ಕೆ ಸಾಗುತ್ತಾ ಸ.ನಂ:216,201,197,153,152,149,148,146,145 ರ ಗುಬ್ಬಿ ಗ್ರಾಮದ ಗಡಿಯೊಂದಿಗೆ ಸಾಗುತ್ತಾ ಸ.ನಂ: 145 ರ ಗಡಿ ತಲುಪಿ ಉತ್ತರಕ್ಕೆ ಸಾಗುತ್ತಾ ಸ.ನಂ: 143,142 ರ ಗಡಿ ತಲುಪಿ ಪೂರ್ವಕ್ಕೆ ತಿರುಗಿ ಸ.ನಂ: 135 ರ ಗಡಿಯೊಂದಿಗೆ ಉತ್ತರಕ್ಕೆ ಸಾಗುತ್ತಾ ಸ.ನಂ: 134 ರ ಗಡಿ ತಲುಪಿ ಪಶ್ಚಿಮಕ್ಕೆ ತಿರುಗಿ ಸ.ನಂ: 136 ರ ಗಡಿ ತಲುಪಿ ಉತ್ತರಾಭಿಮುಖವಾಗಿ ಪೂರ್ವಕ್ಕೆ ತಿರುಗಿ ಸ.ನಂ: 126,129 ರ ಗ್ರಾಮದ ಗಡಿಯೊಂದಿಗೆ ರಾಜ್ಯ ಹೆದ್ದಾರಿ-84 ನ್ನು ದಾಟಿ ಸ.ನಂ: 98 ರ ಗ್ರಾಮದ ಗಡಿಯೊಂದಿಗೆ ಪೂರ್ವಕ್ಕೆ ಸಾಗುತ್ತಾ ಸ.ನಂ: 131 ರ ನೈರುತ್ಯ ವಲಯವನ್ನು ತಲುಪಿ ಸ.ನಂ: 133 ರ ಗಡಿಯೊಂದಿಗೆ ದಕ್ಷಿಣಾಭಿಮುಖವಾಗಿ ಸಾಗುತ್ತಾ ಪೂರ್ವಕ್ಕೆ ತಿರುಗಿ 'ಎ' ಬಿಂದುವಿಗೆ ಸೇರುತ್ತದೆ.

ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ ಗುಬ್ಬಿ

ಅನುಬಂಧ-2

ಕ್ರ.ಸಂ.	ಸಂಸ್ಥೆಯ ಹೆಸರು	ಗುತ್ತಿಗೆ/ ಕ್ರಯ	ನಿವೇಶನ ನೀಡಿದ ವರ್ಷ	ವಿಸ್ತೀರ್ಣ	ಷರಾ
1.	ಪರಿಶಿಷ್ಟ ಜಾತಿ/ಪಂಗಡದ ಹಾಸ್ಟೆಲ್	---	---	0.20 ಗುಂಟೆ	ದಿನಾಂಕ:25/03/2006 ರ ಸಾಮಾನ್ಯ ಸಭೆಯಲ್ಲಿ ಮಂಜೂರು ಮಾಡಲಾಗಿರುತ್ತದೆ.
2.	ಹೇಮಾವತಿ ಇಲಾಖೆ	---	---	6-00 ಎಕರೆ	ದಿನಾಂಕ:04/10/2011 ರ ಸಾಮಾನ್ಯ ಸಭೆಯಲ್ಲಿ ಮಂಜೂರು ಮಾಡಲಾಗಿರುತ್ತದೆ.
3.	ನ್ಯಾಯಾಧೀಶರ ವಸತಿ ಗೃಹ	---	---	2-00 ಎಕರೆ	
4.	ಅರಣ್ಯ ಇಲಾಖೆ	---	---	0-15 ಗುಂಟೆ	---
5.	ಒಕ್ಕಲಿಗರ ಸಮುದಾಯಭವನ	---	---	0-20 ಗುಂಟೆ	ಸರ್ಕಾರದ ಆದೇಶ ಸಂಖ್ಯೆ:ನಅಇ 66 ಟಿಎಂಡಿ 98 ಬೆಂಗಳೂರು ದಿನಾಂಕ:06/11/1998 ರಂತೆ ನಿವೇಶನ ಮಂಜೂರು ಮಾಡಲಾಗಿರುತ್ತದೆ.
6.	ಸಾರ್ವಜನಿಕ ಶಿಕ್ಷಣ ಇಲಾಖೆ	---	---	0-20 ಗುಂಟೆ	ಸರ್ಕಾರದ ಆದೇಶ ಸಂಖ್ಯೆ:ನಅಇ 102 ಟಿಎಂಡಿ 98 ಬೆಂಗಳೂರು ದಿನಾಂಕ:11/09/1998 ರಂತೆ ನಿವೇಶನ ಮಂಜೂರು ಮಾಡಲಾಗಿರುತ್ತದೆ.
7.	ವೀರಶೈವ ಸಮಾಜ	---	---	1-00 ಎಕರೆ	---
8.	ಕೃಷಿ ಇಲಾಖೆ	---	---	---	---
9.	ನಿವೃತ್ತಿ ನೌಕರರ ಸಂಘ	---	---	---	ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ರವರ ಪತ್ರದ ಅಧಿಕೃತ ಜ್ಞಾಪನ ಸಂಖ್ಯೆ:ಡಿಯುಡಿಸಿ/02/ಸಿಆರ್/271/2009-10 ದಿನಾಂಕ:30/01/2010 ರಂತೆ ನಿವೇಶನ ಮಂಜೂರು ಮಾಡಲಾಗಿರುತ್ತದೆ.
10.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	---	---	10-00 ಎಕರೆ	---
11.	ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಲಿ(ರಿ)	---	---	30*25 ಅಡಿ	ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ರವರ ಪತ್ರದ ಅಧಿಕೃತ ಜ್ಞಾಪನ ಸಂಖ್ಯೆ:ಡಿಯುಡಿಸಿ/02/ಸಿಆರ್/683/2008-09 ದಿನಾಂಕ:30/12/2011 ರಂತೆ ನಿವೇಶನ ಮಂಜೂರು ಮಾಡಲಾಗಿರುತ್ತದೆ.

12.	ವೈಷ್ಣವಿ ಸಮಾಜ	ಕ್ರಯ	2011-12	30*50 ಅಡಿ	ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ರವರ ಪತ್ರದ ಅಧಿಕೃತ ಜ್ಞಾಪನ ಸಂಖ್ಯೆ:ಡಿಯುಡಿಸಿ/02/ಸಿಆರ್/595/2008-09 ದಿನಾಂಕ:04/01/2012 ರಂತೆ ನಿವೇಶನ ಮಂಜೂರು ಮಾಡಲಾಗಿರುತ್ತದೆ.
13.	ತಾಲ್ಲೂಕು ಯಾದವರ ಸಂಘ	---	---	0-20 ಗುಂಟೆ	ಸರ್ಕಾರದ ಆದೇಶ ಸಂಖ್ಯೆ:ನಅಇ 99 ಟಿಎಂಬಿ 99 ಬೆಂಗಳೂರು ದಿನಾಂಕ:14/12/1999 ರಂತೆ ನಿವೇಶನ ಮಂಜೂರು ಮಾಡಲಾಗಿರುತ್ತದೆ.

ಮುಖ್ಯಾಧಿಕಾರಿ ಕೆ.ಎಂ.ಎ.ಎಸ್.ಶ್ರೇಣಿ-II
ಪಟ್ಟಣ ಪಂಚಾಯಿತಿ ಗುಬ್ಬಿ.